# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 528

ಸದಸ್ಯರ ಹೆಸರು : ಶ್ರೀ ಎಂ.ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 11.07.2023

ಉತ್ತರಿಸುವವರು : ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಗಣಿಗಾರಿಕೆಯಿಂದ ಬಾಧಿತಗೊಂಡಿರುವ ಜಿಲ್ಲೆಗಳಲ್ಲಿ ಪುನಶ್ಚೇತನ ಮತ್ತು ಪುನರ್ ವಸತಿ ಅನುಷ್ಠಾನಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು; ಪುನಶ್ಚೇತನ ಮತ್ತು ಪುನರ್‌ವಸತಿ ಕಾರ್ಯಕ್ರಮಗಳ ವಿಸ್ತೃತ ಉದ್ದೇಶಗಳು ಯಾವುವು; | A. ಗಣಿ ಬಾಧಿತ ಪ್ರದೇಶಗಳ ಹಾಗೂ ಜನ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ ಅಡಿಯಲ್ಲಿ ಸಂಗ್ರಹಿಸಿದ ಡಿಎಂಎಫ್ ಮೊತ್ತ ವಿನಿಯೋಗಿಸಲಾಗುತ್ತಿದೆ.<br><br>DMFT-2016 ರ ನಿಯಮ 18(2) ರಂತೆ ಡಿಎಂಎಫ್ ನಿಧಿಯಲ್ಲಿ ಸಂಗ್ರಹಿಸಿದ ಒಟ್ಟು ಮೊತ್ತದಲ್ಲಿ ಶೇ.10 ರಷ್ಟು ಮೊತ್ತವನ್ನು ಎಂಡೋಮೆಂಟ್ ಗಾಗಿ ಹಾಗೂ ಶೇ.5 ರಷ್ಟು ಮೊತ್ತವನ್ನು ಆಡಳಿತಾತ್ಮಕ ವೆಚ್ಚಕ್ಕಾಗಿ ಕಾಯ್ದಿರಿಸಿ ಉಳಿದ ಶೇ.85 ರಲ್ಲಿ 60:40 ಅನುಪಾತದಂತೆ ಗಣಿ ಬಾಧಿತ ಪ್ರದೇಶಗಳಲ್ಲಿ ಈ ಕೆಳಕಂಡ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸುವುದು ಮುಖ್ಯ ಉದ್ದೇಶವಾಗಿರುತ್ತದೆ.<br><br>**<u>ಶೇಕಡ 60ರ ಅನುಪಾತದಲ್ಲಿ ಕೈಗೊಂಡ ಯೋಜನೆಗಳು:</u>**<br>1) ಕುಡಿಯುವ ನೀರು<br>2) ಪರಿಸರ ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣದ ಅಳತೆ<br>3) ಆರೋಗ್ಯ<br>4) ಶಿಕ್ಷಣ<br>5) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಂಬಂಧ ಕಾರ್ಯಕ್ರಮ<br>6) ವಯಸ್ಸಾದ ಮತ್ತು ಅಂಗವಿಕಲ ವ್ಯಕ್ತಿಗಳ ಕಲ್ಯಾಣ.<br>7) ಕೌಶಲ್ಯ ಅಭಿವೃದ್ಧಿ<br>8) ನೈರ್ಮಲ್ಯತೆ.<br><br>**<u>ಶೇಕಡ 40ರ ಅನುಪಾತದಲ್ಲಿ ಕೈಗೊಂಡ ಯೋಜನೆಗಳು:</u>**<br>1) ಭೌತಿಕ ಮೂಲಸೌಕರ್ಯ<br>2) ನೀರಾವರಿ<br>3) ಇಂಧನ ಮತ್ತು ಜಲನಯನ ಅಭಿವೃದ್ಧಿ<br>4) ಗಣಿಗಾರಿಕೆ ಜಿಲ್ಲೆಗಳಲ್ಲಿ ಪರಿಸರದ ಗುಣಮಟ್ಟ ಹೆಚ್ಚಿಸುವುದು.<br><br>ರಾಜ್ಯದಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಅಡಿಯಲ್ಲಿ 2015-16 ನೇ ಸಾಲಿನಿಂದ 2023-24 (ಮೇ-2023) ರವರೆಗೆ ಒಟ್ಟು ರೂ.4118.17 ಕೋಟಿ ಸಂಗ್ರಹವಾಗಿರುತ್ತದೆ. ಡಿಎಂಎಫ್ ಅಡಿಯಲ್ಲಿ ಸಂಗ್ರಹಿಸಿದ ಮೊತ್ತದಲ್ಲಿ ರೂ.3932.45 ಕೋಟಿ ಮೊತ್ತಕ್ಕೆ ಕ್ರಿಯಾಯೋಜನೆಯನ್ನು ತಯಾರಿಸಿ 12132 ಕಾಮಗಾರಿಗಳನ್ನು ಕೈಗೊಂಡು ರೂ.1885.95 ಕೋಟಿ ಮೊತ್ತ ವಿನಿಯೋಗಿಸಿ 5159 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.<br><br>B. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ರಾಜ್ಯ ಸರ್ಕಾರವು ಬಳ್ಳಾರಿ, ವಿಜಯನಗರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿನ ಗಣಿಬಾಧಿತ ಪ್ರದೇಶಗಳ ಪುನಃಶ್ಚೇತನ ಯೋಜನೆಗಳ ಅನುಷ್ಠಾನ/ ಮೇಲುಸ್ತುವಾರಿಗಾಗಿ ವಿಶೇಷ ಉದ್ದೇಶಗಳ ನಿಗಮ (SPV) ಎಂದು, ಕರ್ನಾಟಕ ಗಣಿ ಪರಿಸರ ಪುನಃಶ್ಚೇತನ ನಿಗಮವನ್ನು ಸ್ಥಾಪಿಸಿರುತ್ತದೆ.<br><br>ನಿಗಮವು ಮೇಲಿನ ನಾಲ್ಕು ಜಿಲ್ಲೆಗಳಲ್ಲಿ ಗಣಿಗಾರಿಕೆಯಿಂದ ಬಾಧಿತವಾದ ಪ್ರದೇಶಗಳ ಸಾಮಾಜಿಕ, ಆರ್ಥಿಕ ಮತ್ತು ಪರಿಸರ ಅಭಿವೃದ್ಧಿಗೆ ಪೂರಕವಾದ ಪರಿಸರ ಪುನಃಶ್ಚೇತನ, ಕೃಷಿ ಮತ್ತು ಸಂಬಂಧಿಸಿದ ಚಟುವಟಿಕೆಗಳು, ಕುಡಿಯುವ ನೀರು ಮತ್ತು ನೈರ್ಮಲ್ಯ ಗ್ರಾಮೀಣ ರಸ್ತೆಗಳು, ಆರೋಗ್ಯ, ಶಿಕ್ಷಣ, ದುರ್ಬಲ ವರ್ಗಗಳ ಅಭಿವೃದ್ಧಿ, ವಸತಿ, ಕೌಶಲ್ಯಾಭಿವೃದ್ಧಿ, ಪ್ರವಾಸೋದ್ಯಮ, ನೀರಾವರಿ, ಮೂಲಭೂತ ಸೌಕರ್ಯ |

| | | |
|---|---|---|
| | | (Physical infrastructure), ರಸ್ತೆ ಮತ್ತು ಸಾಲಿಗೆ, ರೈಲ್ವೆ ಮೂಲಭೂತ ಸೌಕರ್ಯ ಮುಂತಾದ ಯೋಜನೆಗಳನ್ನು ಅನುಷ್ಠಾನಗೊಳುವುದು ಯೋಜನೆಯ ಉದ್ದೇಶವಾಗಿರುತ್ತದೆ. (ವಿವರಗಳು ಅನುಬಂಧ 1ರಲ್ಲಿ ಒದಗಿಸಲಾಗಿದೆ) |
| ಆ) | ಗಣಿಗಾರಿಕೆ ಆಡಳಿತವನ್ನು ಸಂಪೂರ್ಣವಾಗಿ ಗಣಕೀಕರಣಗೊಳಿಸಲಾಗಿದೆಯೇ; | ಹೌದು. ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಖನಿಜಾಡಳಿತವನ್ನು Integrated Lease Management System (ILMS) ಮೂಲಕ ನಿರ್ವಹಿಸಲಾಗುತ್ತದೆ. ಅಲ್ಲದೇ ಕೇಂದ್ರ ಕಛೇರಿಯಲ್ಲಿ ಕಡತಗಳನ್ನು E-Office ಮೂಲಕ ವಿಲೇವಾರಿ ಮಾಡಲಾಗುತ್ತಿದೆ. |
| ಇ) | ಕರ್ನಾಟಕದ ಖನಿಜ ಸಂಪನ್ಮೂಲಗಳು ಯಾವುವು? | ಕರ್ನಾಟಕದಲ್ಲಿ ಖನಿಜ ಸಂಪತ್ತು ಹೇರಳವಾಗಿರುತ್ತದೆ. ಕರ್ನಾಟಕದಲ್ಲಿ ದೊರಕುವ ಪ್ರಮುಖ ಮುಖ್ಯ ಖನಿಜ ಮತ್ತು ಉಪ ಖನಿಜಗಳ ವಿವರ ಈ ಕೆಳಕಂಡತಿದೆ.<br><br>**ಮುಖ್ಯ ಖನಿಜಗಳು:** ಚಿನ್ನ,ಕಬ್ಬಿಣದ ಅದಿರು, ಮ್ಯಾಂಗನಿಸ್, ಬಾಕ್ಸೈಟ್, ಸುಣ್ಣದ ಕಲ್ಲು ಮುಂತಾದವುಗಳು.<br><br>**ಉಪ ಖನಿಜಗಳು:**ಮುಖ್ಯವಾಗಿ ಅಲಂಕಾರಿಕ ಶಿಲೆ (Granite),ಕೊರಂಡಮ್, ಡೋಲೋಮೈಟ್, ಮೈಕಾ, ಸಿಲಿಕಾಸ್ಯಾಂಡ್, ಚೈನಾಕ್ಲೇ ಇತ್ಯಾದಿಗಳು ಸೇರಿದಂತೆ 15 ಉಪ ಖನಿಜಗಳಿರುತ್ತವೆ. ನಿರ್ದಿಷ್ಟವಲ್ಲದ ಉಪ ಖನಿಜಗಳಲ್ಲಿ ಕಟ್ಟಡ ಕಲ್ಲು, ಮರಳು, Quartz, Quartzite, Ocher, Laterite, Murram ಇತ್ಯಾದಿ ಸೇರಿದಂತೆ ಒಟ್ಟು 32 ಉಪಖನಿಜಗಳು ಇರುತ್ತವೆ.<br>ಮಾಹಿತಿಯನ್ನು ಅನುಬಂಧ-2ರಲ್ಲಿ ಒದಗಿಸಿದೆ. |

**ಸಂಖ್ಯೆ: ಸಿಐ 78ಎಂಎಂಎಂ 2023**

(signature)

**(ಎಸ್.ಎಸ್. ಮಲ್ಲಿಕಾರ್ಜುನ್)**
**ಗಣಿ ಮತ್ತು ಭೂವಿಜ್ಞಾನ ಹಾಗೂ**
**ತೋಟಗಾರಿಕೆ ಸಚಿವರು**

ಅನುಬಂಧ - 1

ಮುಖ್ಯ ಖನಿಜ

| | |
|---|---|
| 1 | ಚಿನ್ನ ಮತ್ತು ಬೆಳ್ಳಿ (Gold & Silver) |
| 2 | ಕಬ್ಬಿಣದ ಅದಿರು (Iron ore) |
| 3 | ಮ್ಯಾಂಗನೀಸ್ (Mangnese) |
| 4 | ಬಾಕ್ಸೈಟ್ (Bauxite) |
| 5 | ಸುಣ್ಣದ ಕಲ್ಲು (Lime Stone) |
| 6 | ಮ್ಯಗ್ನಸೈಟ್ (Magnasite) |
| 7 | ಕ್ರೋಮೈಟ್ (Chromite) |
| 8 | ಕೈನೆಟ್ (Kyanite) |
| 9 | ಕಪ್ಪೆ ಚಿಪ್ಪು (ಉತ್ತರ ಕನ್ನಡ ಜಿಲ್ಲೆ) (Lime shell) |
| 10 | ತಾಮ್ರ (Copper) |
| 11 | ಟೈಟಾನಿಫೆರಸ್ ಮ್ಯಾಗ್ನಟೈಟ್ (Titaniferous Magnatite) |
| 12 | ಅಲ್ಯುಮಿನಸ್ ಮ್ಯಗ್ನಸೈಟ್ (Aluminious Laterite) |
| 13 | ಸಿಲಿಮನೈಟ್ (Sillimanite) |
| 14 | ವರ್ಮಿಕ್ಯುಲೆಟ್ (Vermiculate) |
| | ನಿರ್ದಿಷ್ಟ ಉಪಖನಿಜ |
| 1 | ಕೊರಂಡಮ್ (Corrundum) |
| 2 | ಡೊಲೊಮೈಟ್ (Dolomite) |
| 3 | ಡುನೈಟ್ / ಪೈರಾಕ್ಸೆನೈಟ್ (Dunite or Pyroxenite) |
| 4 | Felsite and its varieties suitable for use as Ornamental Stones |
| 5 | ಫೆಲ್‌ಡ್‌ಸ್ಪೆರ್ (Feldspar) |
| 6 | ಫುಚೆಸೈಟ್ ಕ್ವಾರ್ಟೈಟ್ (Fuchsite Quartzite) |
| 7 | ಜಸ್ಪರ್ (Jasper) |
| 8 | ಮಾರ್ಬಲ್ / ಕ್ರಿಸ್‌ಟಲೈನ್ ಲೈಮ್ ಸ್ಟೋನ್ / ಆರ್ನಮೆಂಟಲ್ ಸ್ಟೋನ್ (Marble or crystalline Limestone as Ornamental Stone |
| 9 | ಮೈಕಾ (Mica) |
| 10 | ಆರ್ನಮೆಂಟಲ್ & ಡೆಕೊರೆಟಿವ್ ಬಿಲ್ಡಿಂಗ್‌ಸ್ಟೋನ್ (Ornamental and decorative building stone) |
| 11 | Sandstone and their varieties, suitable for use as Ornamental Stones |
| 12 | Steatite suitable for use as Ornamental stone |
| 13 | ಸಿಲಿಕಾ ಸ್ಯಾಂಡ್ (Silica Sand) |
| 14 | ಕೊಲೈನ್ & ಚೈನಾ ಕ್ಲೇ (Kaolin and China Clay) |
| 15 | Ordinary building stone and any other minor mineral used for M-sand purpose |

ನಿರ್ದಿಷ್ಟವಲ್ಲದ ಉಪಖನಿಜ

| | |
|---|---|
| 1 | Agate |
| 2 | Ball clay |
| 3 | Barytes |
| 4 | Bentonite |
| 5 | Brick and Tile clays |
| 6 | Calcareous Sand |
| 7 | Calcite |
| 8 | chalk |
| 9 | Chalcedony |
| 10 | Clay (others) |
| 11 | Diaspore |
| 12 | Fire clay |
| 13 | Fuller's Earth |
| 14 | Gypsum |
| 15 | Laterite |
| 16 | Lime Kankar |
| 17 | Lime shell used for other than industrial purpose |
| 18 | Lime stone under title "Shabad Stone" where used for building stone |
| 19 | Lime stone (Non-Cement) |
| 20 | Murram |
| 21 | Ochre |
| 22 | Ordinary sand |
| 23 | Ordinary Building stones for other than M-sand purpose |
| 24 | Pyrophylite |
| 25 | Quartz |
| 26 | Quartzite |
| 27 | Sand (others) |
| 28 | Sand stone used for making household aricles |
| 29 | Shale |
| 30 | Slate |
| 31 | Steatite or Talc or Soap stone |
| 32 | All other minor minerals |